1.ಪ್ರಶ್ನೋತ್ತರ

1. ಅ. ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ಪ್ರಶ್ನೆ ಸಂಖ್ಯೆ: 1(156)

ಅಧ್ಯಕ್ಷರು: ಡಾ. ಸಾರ್ವಭೌಮ ಬಗಲಿಯವರ ಪ್ರಶ್ನೆಗೆ ಕಾಲಾವಕಾಶ ಕೋರಿದ್ದಾರೆ.

ಪ್ರಶ್ನೆ ಸಂಖ್ಯೆ: 2(27)

ಅಧ್ಯಕ್ಷರು: ಡಾ: ಹೆಚ್.ಸಿ. ಮಹದೇವಪ್ಪನವರೆ, ತಮ್ಮ ಪ್ರಶ್ನೆ Health Department ನಿಂದ Medical Department ಗೆ ವರ್ಗಾವಣೆಯಾಗಿದೆ.

ಶ್ರೀ ಎಸ್. ಸುರೇಶ್‌ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): Monday ಉತ್ತರ ಕೊಡಿಸುತ್ತೇನೆ.

ಅಧ್ಯಕ್ಷರು: Monday ತೆಗೆದುಕೊಳ್ಳುತ್ತೇನೆ.

ಪ್ರಶ್ನೆ ಸಂಖ್ಯೆ: 3(161)

ಮಾನ್ಯ ಸದಸ್ಯರಾದ ಶಾಮನೂರು ಶಿವಶಂಕರಪ್ಪರವರು ಹಾಜರಿರಲಿಲ್ಲ.

ಕಾಲೇಜುಗಳ ದುಸ್ಥಿತಿ
ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 04 :(43)

ಡಾ: ಮಾಲಕರೆಡ್ಡಿ ಎ.ಬಿ. (ಯಾದಗಿರಿ)

ಅ) ಯಾದಗಿರಿ ನಗರದ ಸರ್ಕಾರಿ ಪದವಿ ಕಾಲೇಜು ಕಟ್ಟಡವು ನಿರ್ವಹಣೆ ಇಲ್ಲದೆ ಸಂಪೂರ್ಣ ದುಸ್ಥಿತಿಯಲ್ಲಿದ್ದು ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿಗಳು ತೀವ್ರ ಆತಂಕದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹೈಕೋರ್ಟ್ ನ್ಯಾಯಾಧೀಶರೊಬ್ಬರು ಕಾಲೇಜಿನ ಕಟ್ಟಡಕ್ಕೆ ಭೇಟಿನೀಡಿ ಕಟ್ಟಡದ ಸುಧಾರಣೆಗೆ ಶಿಫಾರಸ್ಸು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ ಕಟ್ಟಡದ ನಿರ್ವಹಣೆಗೆ/ದುರಸ್ಥಿಗೆ ಸರ್ಕಾರವು ಯಾವ ಕ್ರಮ ಕೈಗೊಂಡಿದೆ;

ಈ) ಎಷ್ಟು ಅವಧಿಯಲ್ಲಿ ಈ ಕೆಲಸ ಪೂರ್ತಿಗೊಳಿಸಲಾಗುವುದು?

ಶ್ರೀ ಸಿ.ಟಿ. ರವಿ (ಉನ್ನತ ಶಿಕ್ಷಣ ಸಚಿವರು)

ಅ) ಬಂದಿದೆ.

ಆ) ಬಂದಿದೆ.

ಇ) ಕಟ್ಟಡದ ನಿರ್ವಹಣೆಗಾಗಿ ತಗಲುವ ಅಂದಾಜು ವೆಚ್ಚ ರೂ. 50.00 ಲಕ್ಷಕ್ಕೆ ಕಾಲೇಜಿನ ಪ್ರಾಂಶುಪಾಲರ ಮೂಲಕ ಲೋಕೋಪಯೋಗಿ ಇಲಾಖೆಯಿಂದ ಅಂದಾಜು ಪಟ್ಟಿಯನ್ನು ತರಿಸಿಕೊಳ್ಳಲಾಗಿದೆ.

ಈ) ಅನುದಾನದ ಲಭ್ಯತೆಯನ್ನು ಆಧರಿಸಿ ಮುಂದಿನ ಆರ್ಥಿಕ ವರ್ಷದಲ್ಲಿ ಅನುದಾನ ಒದಗಿಸಿಕೊಂಡು ಕಟ್ಟಡದ ಕೆಲಸವನ್ನು ಪೂರ್ಣಗೊಳಿಸಲಾಗುವುದು.

ಡಾ: ಎ.ಬಿ. ಮಾಲಕರೆಡ್ಡಿ: ವಿದ್ಯಾರ್ಥಿ, ಶಿಕ್ಷಕರಿಗೆ ಕುಡಿಯಲು ನೀರು ಒದಗಿಸದೇ ಇರುವುದು ಮತ್ತು SanitaryConditions ಬಹಳ ಕೆಳಮಟ್ಟದಲ್ಲಿದೆ. ಈ ಬಗ್ಗೆ ಪತ್ರಿಕೆಯಲ್ಲಿ ಬಂದಿದ್ದನ್ನು High Court ನ ನ್ಯಾಯಾಧೀಶರೊಬ್ಬರು ಓದಿ, ಅದಕ್ಕೆ special inspection ಹಾಕಿಕೊಂಡು ಯಾದಗಿರಿಗೆ ಬಂದಿದ್ದರು. ಅವರು ಬಂದು ನೋಡಿ report ಕಳುಹಿಸಿ ಒಂದು ವರ್ಷದ ಮೇಲೆ ಆಯಿತು. ಇನ್ನೂ ಇವರು ಅಂದಾಜು ಪಟ್ಟಿ ತಯಾರಿಸಲಾಗಿದೆ ಎಂದು ಹೇಳುತ್ತಾರೆ. 40 ಲಕ್ಷ ರೂ. ಎಂದು ಹೇಳುತ್ತಾರೆ. 40 ಲಕ್ಷ ರೂಪಾಯಿ ಆಗುವುದಿಲ್ಲ. PWD ನವರು, ಸುಮಾರು 80 ಲಕ್ಷ ರೂಪಾಯಿ ಆದರೆ ಅದೆಲ್ಲ ಸರಿ ಹೋಗುತ್ತದೆಂದು ಹೇಳುತ್ತಾರೆ. ನೆಲ ಹಾಸಿಗೆ ಎಲ್ಲ ರೂಂಗಳಲ್ಲಿಯೂ ಕುಸಿದಿದೆ. ಎರಡನೆಯದಾಗಿ, ಪಿ.ಜಿ. ವಿದ್ಯಾಭ್ಯಾಸಕ್ಕಾಗಿ ಈ ಕಾಲೇಜನ್ನು University ಯವರು recognize ಮಾಡಿ P.G. Courses ಅನ್ನು ಕೂಡ ಪ್ರಾರಂಭ ಮಾಡಿದ್ದಾರೆ.

ವಿದ್ಯಾರ್ಥಿಗಳ ಒತ್ತಡ ವಿಪರೀತವಾಗಿದೆ. ಶಿಕ್ಷಕರಿಗೆ University ಮಟ್ಟದ ಶಿಕ್ಷಣ ಆಗಿರುವ ಕಾರಣ, ಶಿಕ್ಷಕರಿಗೆ ಕೂರಲಿಕ್ಕೇ ರೂಂಗಳಿಲ್ಲ. ತಾವು ಒಂದು ಸಲ ಬಂದು inspection ಮಾಡಿ ಎಂದು ನಾನು ಹಿಂದಿನ ಕಾರ್ಯದರ್ಶಿಯವರಿಗೆ ವಿನಂತಿ ಮಾಡಿಕೊಂಡಿದ್ದೆ. ಈಗ ಈ ಇಲಾಖೆಗೆ ಹೊಸ ಪ್ರಧಾನ ಕಾರ್ಯದರ್ಶಿಯವರು ಬಂದಿದ್ದಾರೆ. ಇಂಥ ಸಮಸ್ಯೆ ಬಗ್ಗೆ High Court ನ ನ್ಯಾಯಧೀಶರವರಿಗೇ ಬಂದು ನೋಡಲು ಸಮಾಯಾವಕಾಶ ಇರುತ್ತದೆ. ಅಂಥದ್ದರಲ್ಲಿ ನೀವು ಈ ಇಲಾಖೆಯ ಖಾತೆ ವಹಿಸಿಕೊಂಡು ನಿಮಗೆ ಸಮಯ ಸಿಗುವುದಿಲ್ಲ, ನಿಮ್ಮ ಅಧಿಕಾರಿಗಳಿಗೆ ಬಂದು ನೋಡಲು ಸಮಯ ಸಿಗುವುದಿಲ್ಲವೆಂದರೆ ಏನು ಕಾರಣ? ಏಕೆ ಇಷ್ಟು ಅಲಕ್ಷ್ಯ ಮಾಡುತ್ತಿದ್ದೀರಿ? ಯಾದಗಿರಿ ಶಿಕ್ಷಣದ ಸೂಚ್ಯಂಕದಲ್ಲಿ ಬಹಳ ಕೆಳಮಟ್ಟದಲ್ಲಿದೆ. ಇದರ ಬಗ್ಗೆ ಸರ್ಕಾರಕ್ಕೆ ಲಕ್ಷ್ಯವಿಲ್ಲವೇ? ತಾವು ಇದರ ಬಗ್ಗೆ ನಿಖರವಾದ ಉತ್ತರವನ್ನು ಕೊಡಬೇಕು. ಯಾವಾಗ ಬರುತ್ತಾರೆ? ಅವರು ಬಂದು inspection ಮಾಡಬೇಕು. ಇದೇ ವರ್ಷ before March ಕೆಲಸ ಪ್ರಾರಂಭವಾಗಬೇಕು.

ಶ್ರೀ ಸಿ.ಟಿ. ರವಿ (ಉನ್ನತ ಶಿಕ್ಷಣ ಸಚಿವರು): ಹಿರಿಯ ಸದಸ್ಯರಾದ ಡಾ: ಎ.ಬಿ. ಮಾಲಕರೆಡ್ಡಿಯವರು ಸಾರ್ವಜನಿಕ ಹಿತದ ಪ್ರಶ್ನೆಯನ್ನು ಕೇಳಿದ್ದಾರೆ. ಸದರಿ ಕಾಲೇಜು ಪ್ರಾರಂಭವಾಗಿದ್ದು 1979–80ನೇ ಸಾಲಿನಲ್ಲಿ. ಅದಕ್ಕೆ ಹೊಸ ಕಟ್ಟಡವನ್ನು 1991–92ನೇ ಸಾಲಿನಲ್ಲಿ ನಿರ್ಮಿಸಲಾಗಿದೆ. ಈಗ ಆ ಕಟ್ಟಡದಲ್ಲಿ flooring ಎಲ್ಲ ಹೋಗಿದೆ, toilet ಸರಿ ಇಲ್ಲ, ಕುಡಿಯುವ ನೀರಿನ ವ್ಯವಸ್ಥೆ ಇಲ್ಲವೆನ್ನುವಂಥ ದೂರು ಆಗಸ್ಟ್ ತಿಂಗಳಲ್ಲಿ ಕನ್ನಡಪ್ರಭ ದಿನಪತ್ರಿಕೆಯಲ್ಲಿ ಪ್ರಕಟವಾಯಿತು. ನ್ಯಾಯಾಧೀಶರೊಬ್ಬರು 4 ದಿವಸಗಳ ನಂತರ ಅಲ್ಲಿಗೆ ಭೇಟಿ ಕೊಟ್ಟರು ಎನ್ನುವಂಥ ವರದಿಯನ್ನು ಕೇಳಿದ್ದೇನೆ. ಈ ಹಿನ್ನೆಲೆಯಲ್ಲಿಯೇ ಹೆಚ್ಚುವರಿ ಕೊಠಡಿ ನಿರ್ಮಾಣಕ್ಕೋಸ್ಕರ 75 ಲಕ್ಷ ರೂಪಾಯಿಗಳನ್ನು ನಾನು ಸಚಿವನಾಗಿ ಬಂದ ನಂತರ ಯಾದಗಿರಿ ಕಾಲೇಜಿಗೋಸ್ಕರ ಬಿಡುಗಡೆ ಮಾಡಿದ್ದೇನೆ. ಅದಲ್ಲದೆ, ಶೌಚಾಲಯ ಮತ್ತು rest room ನಿರ್ಮಾಣಕ್ಕೋಸ್ಕರ 5 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇನೆ. ಪ್ರಯೋಗಾಲಯಕ್ಕೋಸ್ಕರ 60 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇನೆ. 1 ಕೋಟಿ 40 ಲಕ್ಷ ರೂಪಾಯಿಗಳ ಅನುದಾನವನ್ನು ಈಗ ಕೊಟ್ಟಿದ್ದೇವೆ, ಟೆಂಡರ್ ಹಂತದಲ್ಲಿದೆ, ಇನ್ನು 4–5 ದಿನಗಳಲ್ಲಿ work order ಸಿಕ್ಕಿ ಕೆಲಸ

ಪ್ರಾರಂಭವಾಗುತ್ತದೆ. Tender Process ಆಗಿದೆ. ಆದರೆ, ಮಾನ್ಯ ಸದಸ್ಯರು ಈಗ ಕೇಳಿರುವಂಥದ್ದು ದುರಸ್ತಿಗೆ. ಈಗ ತಾವು ದುರಸ್ತಿಗೆ ಎಂದು ಏನು ಕೇಳಿದ್ದೀರಿ, ಆ ದುರಸ್ತಿಗೆ ಅಂದಾಜು 50 ಲಕ್ಷ ರೂಪಾಯಿ ಬೇಕೆಂದು ಹೇಳಿದ್ದಾರೆ. ನಾನು ಇದಕ್ಕೆ ಪೂರ್ವಭಾವಿಯಾಗಿ ನಮ್ಮ ಅಧಿಕಾರಿಗಳ ಜೊತೆ ಸಮಾಲೋಚನೆ ಮಾಡಿದಾಗ ಅವರಿಗೆ, ಯಾವುದಾದರೂ ಉಳಿಕೆ ಅನುದಾನ ಇದ್ದರೆ ಕೊಡಿ, ಇಲ್ಲದಿದ್ದರೆ ಮುಂದಿನ ಆಯವ್ಯಯದಲ್ಲಿ ಆ ಕಾಮಗಾರಿಯನ್ನು ಕೈಗೆತ್ತಿಕೊಳ್ಳಿ ಎಂದು ಹೇಳಿದ್ದೇನೆ. ಈ ವರ್ಷ ಯಾವುದಾದರೂ ಬೇರೆ ಕಾರಣಕ್ಕೋಸ್ಕರ ಹಣ ಉಳಿದುಕೊಂಡಿದ್ದರೆ ಈ ವರ್ಷವೇ ಕೈಗೆತ್ತಿಕೊಳ್ಳುವುದಕ್ಕೆ ಸೂಚನೆ ಕೊಡುತ್ತೇನೆ. ಅಕಸ್ಮಾತ್ ಅದು ಆಗದೇ ಇದ್ದರೆ, ಮುಂದಿನ ವರ್ಷದ ಆಯವ್ಯಯದಲ್ಲಿ ಆದ್ಯತೆಯ ಆಧಾರದಲ್ಲಿ ಈ ದುರಸ್ತಿ ಕೆಲಸವನ್ನು ಮಾಡಿಸುತ್ತೇನೆ. ಏಕೆಂದರೆ, ಶಿಕ್ಷಣಕ್ಕೆ ಹೆಚ್ಚು ಒತ್ತು ಕೊಟ್ಟ ಕಾರಣಕ್ಕೋಸ್ಕರವೇ, ಆ 194 ಹೊಸ degree college ಪ್ರಾರಂಭವಾಗಿದ್ದು, ಹಾಗಾಗಿ, ನಾನು ಸಚಿವನಾದ ಮೇಲೆ 300 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿಸಿ, ಹೊಸ ಕಟ್ಟಡಕ್ಕೆ, ಹೆಚ್ಚುವರಿ ಕೊಠಡಿಗಳಿಗೆ, ಶೌಚಾಲಯಕ್ಕೆ ಕೊಡುವಂಥ ಕೆಲಸವನ್ನು ಮಾಡಿದ್ದೇವೆ. ನೀವು ನನಗೆ ಒಂದು ಪತ್ರ ಕೊಟ್ಟಿದ್ದಿರಿ. ಆ basis ಮೇಲೇಯೇ 1 ಕೋಟಿ 40 ಲಕ್ಷ ರೂಪಾಯಿಗಳನ್ನು ಕೊಟ್ಟಿರುವಂಥದ್ದು. ದುರಸ್ತಿಗೆಂದು ಕೇಳಿದ್ದೀರಿ. ಖಂಡಿತ, ನೀವು ವಿವೇಚನೆಯಿಂದ, ಆದ್ಯತೆಯ ಮೇಲೆ ಕೇಳಿರುತ್ತೀರಿ. ಆ ನಂಬಿಕೆ ನನಗಿದೆ. ಆ ನಂಬಿಕೆ ಮತ್ತು ಈಗ ಕೇಳಿದರೆ ಆಗಬಹುದು ಎನ್ನುವಂಥ ಭರವಸೆಯಲ್ಲಿ ಕೇಳಿರುತ್ತೀರಿ. ನಿಮ್ಮ ನಿರೀಕ್ಷೆ ಹುಸಿ ಮಾಡುವುದಿಲ್ಲ. ಅದಕ್ಕೆ ಅನುದಾನವನ್ನು ಬಿಡುಗಡೆ ಮಾಡುವಂಥದ್ದಕ್ಕೆ ಬೇಕಾದ ಕ್ರಮವನ್ನು ಕೈಗೊಳ್ಳುತ್ತೇನೆ.

ಡಾ: ಎ.ಬಿ. ಮಾಲಕರೆಡ್ಡಿ: ಅದಕ್ಕೆ ನೀವು ಹಣ ಒದಗಿಸಿರಬಹುದು. ಆದರೆ, ನಾನು ಕೇಳುತ್ತಿರುವುದು, High Court Judge ಬಂದು inspection ಮಾಡಿ ಒಂದೂವರೆ ವರ್ಷವಾದರೂ ಕೂಡ ನೀವು ಅದನ್ನು ರಿಪೇರಿ ಮಾಡುವ steps ಕೂಡ ತೆಗೆದುಕೊಂಡಿಲ್ಲ. 2 ವರ್ಷಗಳಾಯಿತು. ನಾನು repeatedly ಅಧಿಕಾರಿಗಳಿಗೆ remind ಮಾಡುತ್ತಲೇ ಇದ್ದೇನೆ. ಏಕೆ ನೀವು ಆ ಬಗ್ಗೆ ತ್ವರಿತವಾಗಿ ಕ್ರಮ ತೆಗೆದುಕೊಂಡಿಲ್ಲ? Why you have

not undertaken the work expeditiously? High Court Judge ನಂಥ ವ್ಯಕ್ತಿಗಳು paper ನಲ್ಲಿ ಬಂದಿದ್ದನ್ನು ನೋಡಿ ಗಮನಕ್ಕೆ ತೆಗೆದುಕೊಂಡಿದ್ದಾರೆ. High Court ಗೂ ನೀವು ಆದರ ಕೊಡುವುದಿಲ್ಲ, ನಮಗೂ ಆದರ ಕೊಡುವುದಿಲ್ಲ. ಮತ್ತೆ ನೀವು ಯಾರಿಗೆ ಕಿಮ್ಮತ್ತು ಕೊಡುತ್ತೀರಿ? ನಿಮ್ಮನ್ನು ಎಚ್ಚರಿಸಬೇಕಾದರೆ ಏನು ಮಾಡಬೇಕೆಂದು ನಮಗೆ ತಿಳಿಯದಾಗಿದೆ.

ಶ್ರೀ ಸಿ.ಟಿ. ರವಿ: ಆ ಶಾಲೆಯಲ್ಲಿ ಈಗ 725 + 506 ಒಟ್ಟು 1231 ವಿದ್ಯಾರ್ಥಿಗಳಿದ್ದಾರೆ. ಅದನ್ನು ಆಧರಿಸಿಯೇ 1 ಕೋಟಿ 40 ಲಕ್ಷ ರೂಪಾಯಿಗಳನ್ನು ಕೊಟ್ಟಿರುವಂಥದ್ದು. ನಿಮಗೆ ಗೌರವ ಕೊಟ್ಟು ಈ ಶಾಲೆಯ ಪರಿಸ್ಥಿತಿ ಆಧರಿಸಿ ಕೊಟ್ಟಿರುವಂಥದ್ದು. ತಾವು ಈಗ ದುರಸ್ತಿಗೆ ಕೇಳುತ್ತಿದ್ದೀರಿ. ನನ್ನ ಚಿಂತೆ ಏನೆಂದರೆ, ಆ ಕಾಲೇಜು ಪ್ರಾರಂಭವಾಗಿ 20 ವರ್ಷಗಳಾಗಿವೆ. 20 ವರ್ಷಗಳಿಗೇ ಆ ಕಾಲೇಜು ದುರಸ್ತಿ ಸ್ಥಿತಿಗೆ ಬರುತ್ತದೆಯೇ? ಈ ಬಗ್ಗೆಯೂ ಗಂಭೀರವಾಗಿ ಯೋಚನೆ ಮಾಡಬೇಕು. ಹಾಗಿದ್ದರೆ, ಒಂದು ಕಾಲೇಜಿನ ಆಯಸ್ಸು ಕೇವಲ 15 ವರ್ಷಗಳಿಗೆ ಮುಗಿಯುತ್ತದೆಯೇ? ಈ ಬಗ್ಗೆಯೂ ಗಂಭೀರವಾಗಿ ಯೋಚನೆ ಮಾಡಬೇಕು.

ಡಾ: ಎ.ಬಿ. ಮಾಲಕರೆಡ್ಡಿ: ಅಲ್ಲಿ black cotton soil ನಿಂದಾನಿ ಭೂಮಿ ಕುಸಿಯುತ್ತಿದೆ. ಆ ಕಾರಣದಿಂದ ನೆಲ ಹಾಸಿಗೆಯೆಲ್ಲ ಕುಸಿಯುತ್ತಿದೆ. ಅದು ಈಗಿನದಲ್ಲ. 8–10 ವರ್ಷಗಳಿಂದಲೂ ನಡೆಯುತ್ತಲೇ ಇದೆ. ರಪೇರಿ ಮಾಡುತ್ತಲೇ ಇದ್ದಾರೆ, ಮತ್ತೆ ಕುಸಿಯುತ್ತಿದೆ, ಮತ್ತೆ ರಿಪೇರಿ ಮಾಡುತ್ತಿದ್ದಾರೆ. ಇದಕ್ಕೆ ಶಾಶ್ವತ ಪರಿಹಾರ ಇಲ್ಲವೇ?

ಶ್ರೀ ಸಿ.ಟಿ. ರವಿ: ದುರಸ್ತಿ ಪಡಿಸುವುದಕ್ಕೆ ಬೇಕಾದಂಥ ಕ್ರಮ ಕೈಗೊಳ್ಳುತ್ತೇನೆಂದು ಹೇಳಿದ್ದೇನೆ.